
# ಅವಶ್ಯವಾಗಿ ಬೇಕಾದ ಸಂಸ್ಕೃತಿ

ಕರ್ಪಗಮ್ ಎಸ್.


ಮಾಧ್ಯಮಿಕ ಶಾಲೆಯ (ಗ್ರೇಡು 5, 6 ಮತ್ತು 7ರ) ಶಿಕ್ಷಕಿಯಾಗಿ ನಾನು ಮಕ್ಕಳು ತರಗತಿಯಲ್ಲಿ ಪಾಠ ನಡೆದಿರುವಾಗ, ತಮ್ಮ ಬಸ್ಸುಗಳಿಗಾಗಿ ಕಾಯುತ್ತಾ ಶಾಲೆಯ ಅಂಗಳದಲ್ಲಿ ಕುಳಿತು ಮಾತನಾಡುವಾಗ ಅಥವಾ ಶಿಕ್ಷಕರ ಕೊಠಡಿಯನ್ನು ದಾಟಿ ಮುಂದೆ ಹೋಗುವಾಗ ಒಬ್ಬರನ್ನೊಬ್ಬರು ಬೈಯುತ್ತಿರುವುದನ್ನು ಗಮನಿಸಿದ್ದೇನೆ. ಆರಂಭದಲ್ಲಿ ನಾನು ಹರೆಯಕ್ಕೆ ಬರುತ್ತಿರುವ ಮಕ್ಕಳು ಮಾತನಾಡುವಾಗ ಈ ರೀತಿಯಾಗಿ ಒಡ್ಡೊಡ್ಡಾಗಿ ಹಾಗೂ ಇನ್ನೊಬ್ಬ ಸ್ನೇಹಿತನ ಜತೆ ಮಾತು ಶುರು ಮಾಡಲು ಮೃದುವಾಗಿ ಚುಡಾಯಿಸುತ್ತಾ ಮಾತನಾಡುತ್ತಾರೆ ಅಂದುಕೊಂಡಿದ್ದೆ. ಆದರೆ ನಾನೊಬ್ಬ ಶಿಕ್ಷಕಿಯಾಗಿ ಯಾವಾಗಲೂ ಅವರು ಒಬ್ಬರಿಗೊಬ್ಬರು ಎಂಥ ಭಾಷೆಯನ್ನು ಬಳಸುತ್ತಾರೆ, ಅವರು ಹಾಗೆ ಪ್ರತಿಕ್ರಿಯಿಸುವಾಗ ಕೋಪದಿಂದ ಇರುತ್ತಾರೆಯೇ ಎಂಬುದಕ್ಕೆ ಸದಾ 'ಕಿವಿ'ಯಾಗಿರುತ್ತೇನೆ. ಅದೇ ಸಮಯಕ್ಕೆ ಪ್ರತಿಯೊಂದು ಪ್ರತಿಕ್ರಿಯೆಗೂ ನಾನು ಮಧ್ಯೆ ಪ್ರವೇಶಿಸಲು ಹೋಗುವುದಿಲ್ಲ ಅಥವಾ ಇದೊಂದು ಅವರ ಬೆಳವಣಿಗೆಯ ಮಹತ್ವದ ಹಂತ ಎಂದು ತಿಳಿಯುತ್ತೇನೆ. ಈ ಪ್ರಕ್ರಿಯೆಯೊಂದಿಗೇ ಅವರು ಬೆಳೆದು, ತಮ್ಮ ದಾರಿಯನ್ನು ಕಂಡುಕೊಳ್ಳಬೇಕು.

ಈ ಹಿನ್ನೆಲೆಯಲ್ಲಿ, ಈ ಮಕ್ಕಳಿಗೆ ಯಾವುದೇ ಚುಡಾಯಿಸುವಿಕೆಯನ್ನು ಅವರು ಎದುರಿಸುವಾಗ ಅದನ್ನು ಅವರೇ ನಿಭಾಯಿಸಲು ಆಗದೇ ಇದ್ದಾಗ ನನ್ನಿಂದ ಏನಾದರೂ ಅಗತ್ಯ ಸಹಾಯ ಬೇಕಿದ್ದರೆ ಕೇಳಬಹುದು ಎಂಬುದನ್ನು ಬೇರೆ ಬೇರೆ ರೀತಿಯಲ್ಲಿ ಬೇರೆ ಬೇರೆ ಸಮಯಗಳಲ್ಲಿ ಅವರಿಗೆ ಸೂಚಿಸಿದ್ದೇನೆ. ನಾವು ಉಪಾಧ್ಯಾಯರು ಸೇರಿ ಕೆಲವೊಂದು ಇಂಥ ಸಹಾಯ ಬೇಕಿರುವ ಮಕ್ಕಳಿಗೆ ಆ ಮಗು ಒಂಟಿಯಾಗಿದ್ದಾಗ ಅದಕ್ಕೆ ಏನು ಬೇಕು ಎಂಬುದನ್ನು ನಾವು ತಿಳಿದುಕೊಂಡು ನೆರವುನೀಡಬೇಕು ಎಂದು ನಿರ್ಧರಿಸಿದ್ದೇವೆ.




ಏನಾದರೂ ಆಗಬಾರದ್ದು ಆದರೆ ಅವರು ಧೈರ್ಯವಾಗಿ ಬಂದು ನಮಗೆ ಹೇಳುವಷ್ಟು ಸಾಮರ್ಥ್ಯ ಅವರಿಗೆ ಇರಬೇಕು. ಇದನ್ನು ಎಷ್ಟು ನಾಜೂಕಾಗಿ ಮಾಡಲಾಯಿತೆಂದರೆ, ಅವರು ತಮ್ಮ ಸಹಪಾಠಿಗಳ ಎದುರು ಯಾವುದೇ ಮುಜುಗರಕ್ಕೆ ಈಡಾಗಲಿಲ್ಲ. ಸ್ವಲ್ಪ ದಬ್ಬಾಳಿಕೆ ಮಾಡುವ ಹಾಗೂ ನಮ್ಮ ಮಾತುಗಳು ಅಥವಾ ಎಚ್ಚರಿಕೆಗಳನ್ನು ಹಗುರವಾಗಿ ತೆಗೆದುಕೊಳ್ಳುವ ಮಕ್ಕಳ ಜತೆ ಸಹ ಈ ಬಗ್ಗೆ ನಾವು ಮಾತಾಡಿದೆವು.


ಒಮ್ಮೆ ನಾನು ತರಗತಿಯೊಳಗೆ ಹೋದಾಗ, ಇಬ್ಬರು ಮಕ್ಕಳ ಮಾತುಕತೆ ಕೇಳಿಸಿಕೊಂಡೆ. 'ಹೇ, ಇವತ್ತು ಉಪ್ಪಿಟ್ಟು ಮಾಡಿದ್ದಾರೆ... ಛೀ' ಎಂದು ಒಬ್ಬ ಹೇಳಿದ. ನಾನು ತರಗತಿಯೊಳಗೆ ಹೋದ ತಕ್ಷಣ 'ನಿಮಗೆ ಉಪ್ಪಿಟ್ಟು ಇಷ್ಟವಿಲ್ಲವೇ?' ಎಂದು ಕೇಳಿ, ಪಾಠ ಶುರು ಮಾಡಿದೆ. ಆಗ ಒಬ್ಬರ ಮುಖವನ್ನು ಇನ್ನೊಬ್ಬ ನೋಡುತ್ತ ಹೇಳಿದರು: 'ಹಾಗೇನೂ ಇಲ್ಲ ಆಂಟಿ' (ನಾನು ಕೆಲಸ ಮಾಡುತ್ತಿದ್ದ ಶಾಲೆಯಲ್ಲಿ ಶಿಕ್ಷಕಿಯರನ್ನು ಹಾಗೆ ಕರೆಯಲಾಗುತ್ತಿತ್ತು). ಸಮಯ ವ್ಯರ್ಥ ಮಾಡಿಕೊಳ್ಳಬಾರದು ಎಂದು ನನ್ನಷ್ಟಕ್ಕೇ



ನಾನು ಹೇಳಿಕೊಂಡು ಪಾಠ ಮುಂದುವರಿಸಿದೆ. ಆದರೆ ಆಹಾರ ಸೇವನೆ ಅಭ್ಯಾಸ ಹೇಗಿರಬೇಕೆಂದೂ ಮಕ್ಕಳೊಡನೆ ಮಾತನಾಡಬೇಕು ಎಂದು ನನ್ನಷ್ಟಕ್ಕೆ ನಾನು ಹೇಳಿಕೊಂಡೆ.

ಇದಾಗಿ ಒಂದು ತಿಂಗಳು ಕಳೆದ ಬಳಿಕ, ಊಟದ ಕೊಠಡಿಯ ವ್ಯವಸ್ಥಾಪಕರು ಶಿಕ್ಷಕರ ಎದುರು ಒಂದು ದೂರನ್ನು ಸಲ್ಲಿಸಿದರು. ಅದೆಂದರೆ, ಪಾವ್‌ಭಜಿ, ಭೇಲ್‌ಪುರಿ, ಸಿಹಿ ಬನ್, ಎಣ್ಣೆಯಲ್ಲಿ ಕರಿದ ತಿಂಡಿಗಳು ಇದ್ದಾಗ ಮಕ್ಕಳು ನುಗ್ಗಿಬರುತ್ತಾರೆ ಹಾಗೂ ಬೇಯಿಸಿದ ಆಹಾರ ಅಥವಾ 'ಆರೋಗ್ಯಕ್ಕೆ ಒಳ್ಳೆಯದು' ಎಂಬಂತಿದ್ದ ತಿಂಡಿಗಳತ್ತ ಯಾರೂ ಸುಳಿಯುತ್ತಿರಲಿಲ್ಲ.


ಒಂದು ದಿನ ಬಾಲಕನೊಬ್ಬ, ತನ್ನ ತಂದೆಯು ನನ್ನನ್ನು ಭೇಟಿ ಮಾಡಲು ಬಂದರೂ ಬರಬಹುದು ಎಂದು ಹೇಳಿದ. ಆ ಬಾಲಕ ಅವನ ಸಹಪಾಠಿಯೇ ಹೇಳುವಂತೆ ದಯಾಳು ಯಾವಾಗಲೂ ಮೃದುವಾಗಿ ಮಾತಾಡುತ್ತಿದ್ದ ಹಾಗೂ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದ. ಆತನ ಸ್ನೇಹಿತರು ಅವನ ಬಗ್ಗೆ ಹೇಳುತ್ತಿದ್ದ ಸ್ವಭಾವವನ್ನು ಆತನ ಪಾಲಕರಿಗೆ ತಿಳಿಸಬೇಕು ಎಂದು ನಾನೇ


• you start making fun of people then you say "Kho-Kho is for girls - your- a girl - your- a girl."
• You start saying mean stuff
• You draw a picture and say it's you.

ಹಲವು ಸಲ ಅಂದುಕೊಂಡಿದ್ದೆ. ಮಧ್ಯಾಹ್ನದ ಬಳಿಕ ಆ ಬಾಲಕನ ತಂದೆ ಬಂದು ಶಿಕ್ಷಕರ ವಿಶ್ರಾಂತಿ ಕೊಠಡಿಯಲ್ಲಿ ನನ್ನನ್ನು ಭೇಟಿ ಮಾಡಿದರು. ಮುಂದಿನ ಒಂದೆರಡು ನಿಮಿಷಗಳಲ್ಲಿ ಅವರು ತಿಳಿಸಿದ ಮಾತುಗಳನ್ನು ಕೇಳಿ ನನಗೆ ಆಘಾತವಾಯಿತು ಹಾಗೂ ಆ ಮಾತನ್ನು ನಾನೇ ನಂಬಲಿಲ್ಲ. ಆತನ ಮಗ ಇತ್ತೀಚೆಗೆ ಹೆಚ್ಚೆಚ್ಚು ಹಠಮಾರಿಯಾಗುತ್ತಿದ್ದಾನೆ ಹಾಗೂ ಬೇಕೆಂದಿದ್ದು ಸಿಗದೇ ಹೋದರೆ ರಂಪಮಾಡುತ್ತಾನೆ ಎಂದು ಅವರು ಹೇಳಿದರು. ಮೊದಲೆಲ್ಲ ಆತ ತನಗೆ ಏನು ಬೇಕೆಂದು ಹೇಳುತ್ತಿದ್ದ, ಆದರೆ ಪಾಲಕರು ಹೇಳಿದ್ದಕ್ಕೆ ಕೂಡಲೇ ಒಪ್ಪಿಗೆ ಕೊಡುತ್ತಿದ್ದ. ಆರಂಭದಲ್ಲಿ ಆತ ತನ್ನದೇ ಆದ ದಾರಿಯಲ್ಲಿ ಸಾಗುತ್ತಿದ್ದಾನೆ ಎಂದು ಪಾಲಕರು ಭಾವಿಸಿದ್ದರು. ಆದರೆ ಕೆಲವು ತಿಂಗಳ ಬಳಿಕ ಆ ಬಾಲಕ ದುಬಾರಿ ಬ್ರಾಂಡೆಡ್ ಟಿ-ಶರ್ಟ್, ಶೂಗಳು, ಸಾಕ್ಸ್ ಇತರ ಕ್ರೀಡಾ ಸಲಕರಣೆಯನ್ನೇ ಕೇಳುತ್ತಿದ್ದ. ಈ ವರ್ತನೆ ಬಗ್ಗೆ ನೀವೇನಾದರೂ ನನ್ನ ಮಗನ ಜತೆ ಗುಪ್ತವಾಗಿ ಮಾತಾಡುತ್ತೀರಾ ಎಂದು ಬಾಲಕನ ತಂದೆ ನನ್ನನ್ನು ಕೇಳಿದರು. ನನ್ನ ಕೈಲಾದ ಸಹಾಯ ಮಾಡುವುದಾಗಿ ನಾನು ಅವರಿಗೆ ಭರವಸೆ ನೀಡಿದೆನಾದರೂ, ಮುಂದೇನಾಗಬಹುದೋ ಎಂಬುದು ನನಗೂ ಖಚಿತವಾಗಿ ಗೊತ್ತಿರಲಿಲ್ಲ.

ಇತರ ತರಗತಿಗಳ ಹುಡುಗರದೂ ವರ್ತನೆ ಹೀಗೇ ಆಗುತ್ತಿರುವುದು ಅವರ ಪಾಲಕರಿಂದ ನನ್ನ ಸಹೋದ್ಯೋಗಿಗಳಿಗೆ ತಿಳಿದುಬಂತು. ಆಗ ಮಕ್ಕಳನ್ನು ನಾವು ಗಮನಿಸಲು ಶುರು ಮಾಡಿದೆವು. ಆಗ ಗೊತ್ತಾಗದ್ದೇನೆಂದರೆ, ಅವರೆಲ್ಲ ಒಂದೇ ಬ್ರ್ಯಾಂಡ್‌ನ ಬಟ್ಟೆ ಧರಿಸುತ್ತಿದ್ದರು; ಶ್ರೇಷ್ಠ ಎಂದು ಅವರು ಭಾವಿಸಿಕೊಂಡಿದ್ದ ಒಂದೇ ಆಟವನ್ನೇ ಅವರು ಆಡುತ್ತಿದ್ದರು. ಬೇರೆ ಒಳಾಂಗಣ ಕ್ರೀಡೆಗಳನ್ನು ಆಡುವಂತೆ ನಾವು ಸೂಚಿಸಿದಾಗ ಅವೆಲ್ಲ ಮಕ್ಕಳ ಆಟಗಳು ಎಂದು ಜರೆದು, ನಿರ್ಲಕ್ಷ್ಯ ವಹಿಸಿದರು. ಇದೆಲ್ಲಾ ಬೆಳವಣಿಗೆ ಲಕ್ಷಣ ಮತ್ತು ಅವರ ಹಿರಿಯ ತರಗತಿ ವಿದ್ಯಾರ್ಥಿಗಳನ್ನು ಅನುಕರಿಸುತ್ತಿದ್ದಾರೆ ಎಂದು ನಾವು ಅದನ್ನು ಬೆಳೆಸಲಿಲ್ಲ.

ನಾವು ಅದನ್ನು ಅಲ್ಲಿಗೇ ಬಿಟ್ಟರೂ, ಮುಂದಿನ ತಿಂಗಳಲ್ಲಿ ಮತ್ತೆ ಕೆಲವು ಪಾಲಕರು ನಮ್ಮನ್ನು ಭೇಟಿ ಮಾಡಿದಾಗ ನಮಗೆ ಏನೋ ನಡೆಯಬಾರದ್ದು ನಡೆಯುತ್ತಿದೆ ಎಂಬುದು ಗೊತ್ತಾಯಿತು. ಈ ಬಗ್ಗೆ ಶಿಕ್ಷಕರ ಸಭೆಯಲ್ಲಿ ಪ್ರಸ್ತಾಪಿಸಿ, ಚರ್ಚೆ ನಡೆಸಿದೆವು. ಇಂಥದೇ ಘಟನೆಯಲ್ಲಿ ಪಾಲಕರೊಬ್ಬರು ತಮ್ಮ ಮಗನನ್ನು ಮಾತಾಡಿಸುವಂತೆ ಕೋರಿದರು. ನಾನು ಆ ಮಗುವನ್ನು ಕರೆದು, ಆತನ ಹೊಸ ಶೂ ಬಗ್ಗೆ ಕೇಳಿದೆ. ಅದನ್ನು ಹಾಕಿಕೊಂಡು ಸಂತಸದಿಂದ ಆಟವಾಡುತ್ತಿರುವೆಯಾ ಎಂದು ಕೇಳಿದೆ. ಅದಕ್ಕೆ ಆ ಬಾಲಕ ಆಟ ಆಡಲು ಅವಕಾಶ ಸಿಕ್ಕಿಲ್ಲವೆಂದೂ, ಅದನ್ನು ಶಿಕ್ಷಕರಿಗೇನಾದರೂ ಹೇಳಿದರೆ ಇತರರು ತನ್ನನ್ನು ದೂರ ಇಡುತ್ತಾರೆ ಎಂದು ಶಿಕ್ಷಕರಿಗೆ ಹೇಳಿರಲಿಲ್ಲವೆಂದನು. ಆಗ ಗೊತ್ತಾಗಿದ್ದೇನೆಂದರೆ, ಒಬ್ಬರನ್ನೊಬ್ಬರು ನೋಡಿ ಶೂ, ಡ್ರೆಸ್ ಧರಿಸುವಲ್ಲಿ ಹಾಗೂ ತಿಂಡಿತಿನಿಸು ಸೇವನೆಯಲ್ಲೂ ನಕಲು ಮಾಡುತ್ತಿದ್ದರು. ಅಂದರೆ ಒಂದು ಚತುರ ದಬ್ಬಾಳಿಕೆ ಪ್ರಾರಂಭವಾಗಿದೆ ಎಂದಾಯ್ತು! ಇದರಿಂದ ಇನ್ನೇನೇನೋ ಆಗಬಹುದು. ದಾದಾಗಿರಿ ಎಲ್ಲ ತಂಡಗಳಿಗೂ ಅಪಾಯಕಾರಿಯಾದುದೇ ಹಾಗೂ ಇದನ್ನು ತಡೆಯದೇ ಹೋದರೆ ಈ ದಾದಾಗಿರಿ ಮಾಡುವ ಮಕ್ಕಳು ಶಾಲೆಯನ್ನು ಬಿಟ್ಟು ಹೋದ ಮೇಲೆ ಸಮಾಜವಿರೋಧಿ


• People used to call me a teacher's pet, though it has now stopped.
• A friend calls another person dumb for no reason at all.
• When a person keeps putting chit's into someones bag teasing you

ಶಕ್ತಿಗಳಾಗುವ ಅಪಾಯವೂ ಇರುತ್ತದೆ (ರಿಗ್‌ಬಿ, 2003). ಹೀಗಾಗಿ, ಮಕ್ಕಳು ತಮ್ಮ ಸಹಪಾಠಿಗಳ ಜತೆ ನಡೆಸುವ ಮಾತುಕತೆಯಲ್ಲಿ ನಾವು ಮಧ್ಯೆ ಪ್ರವೇಶಿಸಬಾರದು ಎಂಬ ನಿಲುವನ್ನು ಮತ್ತೊಮ್ಮೆ ಪರಿಷ್ಕರಿಸಿದೆವು ಹಾಗೂ ವಿಷಯದ ಗಾಂಭೀರ್ಯವನ್ನು ತಿಳಿಸಿಕೊಡಲು ಮಧ್ಯೆ ಪ್ರವೇಶಿಸಿ ಮಾರ್ಗದರ್ಶನ ನೀಡಲು ನಿರ್ಧರಿಸಿದೆವು. ಈ ವಿಷಯಕ್ಕೆ ನಾವು ಅಸೆಂಬ್ಲಿಯನ್ನು ಬಳಸಿಕೊಂಡೆವು ಮತ್ತು ದಾದಾಗಿರಿಯ ಅಪಾಯದ ಪ್ರದರ್ಶಿಕೆ ತೋರಿಸಿದೆವು. ನಿಧಾನವಾಗಿ ಈ ವಿಷಯ ಪ್ರಸ್ತಾಪಿಸಿದೆವು ಹಾಗೆಯೇ ವಿಷಯದ ಗಂಭೀರತೆಯನ್ನು ಮನದಟ್ಟು ಮಾಡಿಸಿದೆವು. ಆ ಸಭೆಯಲ್ಲಿ ಮಕ್ಕಳು ಕೂಡ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವಂತೆ ಹೇಳಿದೆವು. ಮಕ್ಕಳು ತಮ್ಮ ಸಹಪಾಠಿಗಳು ತಮ್ಮ ಮೇಲೆ ಬೀರಿದ ಪ್ರಭಾವದ ಬಗ್ಗೆ ಬರೆದರು.

ಮೌಲ್ಯಗಳ ಬಗ್ಗೆ ಚರ್ಚೆನಡೆಸಲು ಮುಕ್ತ ಅವಕಾಶ ನೀಡಿದರೆ, ವಿದ್ಯಾರ್ಥಿಗಳ ಆರೋಗ್ಯಕರ ವಾತಾವರಣ ಹೆಚ್ಚುತ್ತದೆ ದಾದಾಗಿರಿ ಕಡಿಮೆಯಾಗಿ ಕಲಿಕಾ ವಾತಾವರಣ ಉತ್ತಮವಾಗಿ ರೂಪುಗೊಳ್ಳುತ್ತದೆ ಎಂಬುದು ಸಂಶೋಧನೆಗಳಿಂದ ತಿಳಿದುಬಂದಿದೆ (ಲೋವಟ್, ಟೂಮೆ, ಕ್ಲೆಮೆಂಟ್, ಕ್ರೊಟಿ ಅಂಡ್ ನೆಲ್ಸನ್, 2009). ದಾದಾಗಿರಿಯಲ್ಲಿ ಹಾನಿ ಅನುಭವಿಸುವವರಿಗಿಂತ ದಾದಾಗಿರಿ ಮಾಡುವವರಿಗೇ ಹೆಚ್ಚು ನೆರವು ಮತ್ತು ಸಲಹೆ ಬೇಕಾಗಿರುವುದು ನಮಗೆ ಗೊತ್ತಾಯಿತು. ಅವರಿಗೆ ಯಾರೋ ದಾದಾಗಿರಿ ಮಾಡಿದ್ದರು ಈಗ ತಮ್ಮ ಸರದಿ ಬಂದಾಗ ಇವರು ಶುರು ಹಚ್ಚಿಕೊಂಡಿರುತ್ತಾರೆ ಇದೆಲ್ಲ ಲಘು ಹಾಸ್ಯದಿಂದ ಆರಂಭವಾಗಿದ್ದು ಒಂದು ಹಂತ ದಾಟಿದ ಮೇಲೆ ಇದನ್ನು ಹೇಗೆ ನಿಲ್ಲಿಸುವುದು ಎಂಬುದೇ ಅವರಿಗೆ ಗೊತ್ತಾಗುತ್ತಿರಲಿಲ್ಲ. ತಮ್ಮನ್ನು ಯಾರೂ ಆಕ್ಷೇಪಿಸುವುದಿಲ್ಲ ಎಂಬುದು ಗೊತ್ತಾಗುತ್ತಲೇ, ಅವರೇ ಖುದ್ದಾಗಿ ನಮ್ಮ ಕಡೆಗೆ ಸಮಸ್ಯೆ ಪರಿಹಾರ ಕೋರಿ ಬಂದರು.

ಒಂದು ಟರ್ಮ್ ವರೆಗೆ ಈರೀತಿ ನೆರವು ನೀಡಿದ ಬಳಿಕ ಅವರಿಗೆ ಸ್ವಸಾಮರ್ಥ್ಯ ಮೈಗೂಡಿಸಲು ಇದು ಸಕಾಲ ಎಂದು ನಮಗೆ ಅನಿಸಿತು. ಶಿಕ್ಷಕರ ಸಭೆಯೊಂದರಲ್ಲಿ ನಾವು ಕಂಡುಕೊಂಡಿದ್ದನ್ನು ಕುರಿತು ಚಿಂತನ ಮಂಥನ ನಡೆಸಿದೆವು ಹಾಗೂ ಈ ಅನುಭವ ನಮ್ಮನ್ನು ಇನ್ನಷ್ಟು ಶ್ರೀಮಂತಗೊಳಿಸಿತು ಎಂದು ಮನಗಂಡೆವು. ಶೈಕ್ಷಣಿಕ ಕೆಲಸಕಾರ್ಯಗಳಿಗಿಂತಲೂ ಒಂದು ಸಾಮರ್ಥ್ಯವರ್ಧನೆಯ ವಾತಾವರಣ ಹೆಚ್ಚು ಮಹತ್ವದ್ದಾಗಿರುತ್ತದೆ. ವಿದ್ಯಾರ್ಥಿಗೆ ಮಾನಸಿಕ ನೆಮ್ಮದಿ ಭದ್ರತೆ ದೊರಕಿದರೆ, ಅವರು ಚೆನ್ನಾಗಿ ಕಲಿಕೆಗೆ ಮುಂದಾಗುತ್ತಾರೆ ಎಂಬುದನ್ನು ಮಿದುಳು ಹಾಗೂ ಭಾವನೆಗಳ ಕುರಿತ ಅಧ್ಯಯನವು ಒತ್ತಿ ಹೇಳಿದೆ (ಬರ್ನಾರ್ಡ್, 1996; ಗೋಲ್‌ಮನ್, 2006): ಶಾಲೆಗಳಲ್ಲಿ ಮಾನಸಿಕ ಭದ್ರತೆ, ಸಾಮಾಜಿಕ ಹಾಗೂ ಭಾವನಾತ್ಮಕ ತಿಳಿವಳಿಕೆಗೆ ಒತ್ತು ಕೊಡುವ ಸಮಗ್ರ, ಕಾಳಜಿಯುಳ್ಳ ಹಾಗೂ ವಿದ್ಯಾರ್ಥಿ ಕೇಂದ್ರಿತ ತರಗತಿ ವಾತಾವರಣ ಅಗತ್ಯವಾಗಿವೆ (ಹಾರ್ಟ್ 1992; ಜಾನ್‌ಸನ್ ಅಂಡ್ ಜಾನ್‌ಸನ್, 2003; ವಾಲ್‌ಬರ್ಗ್, ಜಿನ್ಸ್ ಅಂಡ್ ವಿಸ್‌ಬರ್ಗ್, 2004). ದೈಹಿಕ, ಮಾನಸಿಕ ಭದ್ರತೆಯನ್ನು ಕಲ್ಪಿಸುವುದು ನಮ್ಮ ಬಹು ದೊಡ್ಡ ಕಾರ್ಯ. ಹಲವು ಬಗೆಯ ಸಂಪನ್ಮೂಲಗಳು ಲಭ್ಯವಿದ್ದರೂ, ಮಗುವಿನ ದೃಷ್ಟಿಯಲ್ಲಿ ಅದೊಂದು ಸೂಕ್ಷ್ಮ ವಿಷಯ ಎಂಬುದು ನಮಗೆ ಗೊತ್ತು. ಈ ಲೇಖನ ಕೇವಲ ನಮ್ಮ ಅನುಭವಗಳನ್ನು ಬಿಂಬಿಸುತ್ತದೆ. ಈ ಅನುಭವದಲ್ಲಿ ನಾನು ವೈಯಕ್ತಿಕವಾಗಿ ಕಲಿತ ಕೆಲವು ಅಮೂಲ್ಯ ಸಂಗತಿಗಳನ್ನು ಇಲ್ಲಿ ನೀಡುತ್ತಿದ್ದೇನೆ.

1. ಖಂಡಿಸಬೇಡಿ – ಮಗುವಿನ ಕ್ರಿಯೆ-ಪ್ರತಿಕ್ರಿಯೆಗಳನ್ನು ಅರಿಯಲು ಸ್ವಲ್ಪ ಸಮಯವನ್ನು ವಿನಿಯೋಗಮಾಡಿ.
2. ಆ ಬಗ್ಗೆ ತಿಳವಳಿಕೆ ಪಡೆಯಲು ಆ ಮಗುವಿನ ಪಾಲಕರು, ಸಹಪಾಠಿಗಳು ಹಾಗೂ ಶಿಕ್ಷಕರ ಜತೆ ಚರ್ಚೆ ನಡೆಸಿ. ಇದು ಬರೀ ಮಾತುಕತೆ ಅಲ್ಲ; ಆ ಮಗುವಿನ ಪ್ರಸ್ತುತ ಸ್ಥಿತಿಯ ಬಗ್ಗೆ ಮಾಹಿತಿ ಪಡೆಯುವ ವಿಧಾನ.
3. ಪಾಲಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ. ಅವರಿಗೆ ತಮ್ಮ ಮಗುವಿನ ಬಗ್ಗೆ ಮಾಹಿತಿ ಪಡೆಯುವ ಹಕ್ಕು ಇದೆ. ಅವರು ಜವಾಬ್ದಾರಿ ವಹಿಸಿಕೊಳ್ಳಬೇಕು.ಮಗು ಸಹಪಾಠಿಗಳ ಒತ್ತಡ ಮತ್ತು ಪ್ರಭಾವವನ್ನು ತಡೆದುಕೊಳ್ಳುವುದಕ್ಕೆ ಮತ್ತು ಸಮಾಜದಲ್ಲಿ ಬೆರೆತುಬಾಳುವುದಕ್ಕೆ ಅವರು ಸಹಾಯ ಮಾಡಬಲ್ಲರು.
4. ದಿನದಿನವೂ ಮಗುವಿನ ಬಗ್ಗೆ ಸಂಗತಿ ದಾಖಲಿಸುವ ಡೈರಿ ಬರೆದಿಟ್ಟುಕೊಳ್ಳಿ. ಈ ಅಂಶಗಳು ನಿಖರವಾದ ಸಲಹೆ ಹಾಗೂ ಮಾರ್ಗದರ್ಶನ ಪಡೆಯಲು ಸಹಾಯಮಾಡಬಲ್ಲವು. ಇದು ಅವರು ಇನ್ನಷ್ಟು ಸಮರ್ಥರಾಗಲುಬೇಕಾದ ವಾತಾವರಣವನ್ನು ರಚಿಸುತ್ತದೆ.

**ಉಲ್ಲೇಖಗಳು:**


- ಗೋಲ್ಮನ್ ಡಿ.(2006). ಸೋಷಿಯಲ್ ಇಂಟಲಿಜೆನ್ಸ್: ದಿ ನ್ಯೂ ಸೈನ್ಸ್ ಆಫ್ ಸೋಷಿಯಲ್ ರಿಲೇಶನ್‌ಶಿಪ್ಸ್. ನ್ಯೂಯಾರ್ಕ್: ಬಂಟಮ್ ಬುಕ್ಸ್.
- ಹರ್ಟ್ ಎಸ್. (1992). ಕೊಲಾಬ್ರಟಿವ್ ಕ್ಲಾಸ್‌ರೂಮ್ಸ್. ಇನ್ ಟಿ. ಬೂತ್, ಡಬ್ಲ್ಯೂ ಸ್ವಾನ್, ಎಂ.ಮಾಸ್ಟರ್‌ಟನ್ ಅಂಡ್ ಪಿ. ಪಾಟ್ಸ್. (ಎಡಿಎಸ್) ಲರ್ನಿಂಗ್ ಫಾರ್ ಆಲ್: ಕರಿಕುಲಾ ಫಾರ್ ಡೈವರ್ಸಿಟಿ ಇನ್ ಎಜುಕೇಶನ್ (ಪಿಪಿ. 9?22). ಲಂಡನ್: ರೌಟ್‌ಲೆಡ್ಜ್.
- ಜಾನ್‌ಸನ್ ಡಿ.ಡಬ್ಲ್ಯೂ ಅಂಡ್ ಜಾನ್‌ಸನ್ ಆರ್.ಟಿ. (2003). ಸ್ಟುಡೆಂಟ್ ಮೋಟಿವೇಶನ್ ಇನ್ ಕೋ ಆಪರೇಟಿವ್ ಗ್ರೂಪ್ಸ್: ಸೋಶಿಯಲ್ ಇಂಡಿಪೆಂಡೆನ್ಸ್ ಥೇರಿ. ಇನ್ ಆರ್.ಎಂ. ಗಿಲಿಸ್ ಅಂಡ್ ಎ.ಎಫ್.ಅಶ್ಮಾನ್ (ಇಡಿಎಸ್). ಕೋ ಆಪರೆಟಿವ್ ಲರ್ನಿಂಗ್: ದಿ ಸೋಶಿಯಲ್ ಅಂಡ್ ಇಂಟೆಲೆಕ್ಚುವಲ್ ಔಟ್‌ಕಮ್ಸ್ ಆಫ್ ಲರ್ನಿಂಗ್ ಇನ್ ಗ್ರೂಪ್ಸ್.
- ಲೋವಟ್ ಟಿ., ಟೂಮೆ ಆರ್., ಕ್ಲೆಮೆಂಟ್ ಎನ್.,ಕ್ರೊಟಾ ಆರ್. ಅಂಡ್ ನೆಲ್ಸನ್ ಟಿ. (ಎಡಿಎಸ್) (2009), ವ್ಯಾಲ್ಯೂಸ್ ಎಜುಕೇಶನ್, ಕ್ವಾಲಿಟಿ ಟೀಚಿಂಗ್ ಅಂಡ್ ಸರ್ವೀಸ್ ಲರ್ನಿಂಗ್: ಎ ಟ್ರೊಕಾ ಫಾರ್ ಇಫೆಕ್ಟಿವ್ ಟೀಚಿಂಗ್ ಅಂಡ್ ಟೀಚರ್ ಎಜುಕೇಶನ್. ಟರಿಗಲ್, ಆಸ್ಟ್ರೇಲಿಯಾ: ಡೇವಿಡ್ ಬಾರ್ಲೊ ಪಬ್ಲಿಶಿಂಗ್.
- ರಿಗ್‌ಬಿ ಕೆ. (2003). ಅಡ್ರೆಸಿಂಗ್ ಬುಲಿಯಿಂಗ್ ಇನ್ ಸ್ಕೂಲ್ಸ್: ಥಿಯರಿ ಅಂಡ್ ಪ್ರಾಕ್ಟೀಸ್, ಟ್ರೆಂಡ್ಸ್ ಅಂಡ್ ಇಶ್ಯೂಸ್. ಆಸ್ಟ್ರೇಲಿಯನ್ ಇನ್‌ಸ್ಟಿಟ್ಯೂಟ್ ಆಫ್ ಕ್ರಿಮಿನಾಲಜಿ, 1–6. (ವ್ಯೂವ್ಡ್ 21 ಜೂನ್ 2010).
- ವಾಲ್‌ಬರ್ಗ್ ಎಚ್.ಜೆ., ಜಿನ್ಸ್ ಜೆ.ಇ. ಅಂಡ್ ವಿಸ್‌ಬರ್ಗ್ ಆರ್.ಪಿ. (2004). ರೆಕಮೆಂಡೇಶನ್ಸ್ ಅಂಡ್ ಕನ್‌ಕ್ಲೂಜನ್ಸ್: ಇಂಪ್ಲಿಕೇಶನ್ಸ್ ಫಾರ್ ಪ್ರಾಕ್ಟೀಸ್, ಟ್ರೇನಿಂಗ್, ರಿಸರ್ಚ್ ಅಂಡ್ ಪಾಲಿಸಿ. ಇನ್ ಜೆ.ಇ. ಜಿನ್ಸ್ ಆರ್.ಪಿ. ವಿಸ್‌ಬರ್ಗ್ ಎಂ.ಸಿ. ವಾಂಗ್ ಅಂಡ್ ಎಚ್.ಜೆ. ವಾಲ್‌ಬರ್ಗ್ (ಇಡಿಎಸ್), ಬಿಲ್ಡಿಂಗ್ ಅಕಡೆಮಿಕ್ ಸಕ್ಸೆಸ್ ಆನ್ ಸೋಶಿಯಲ್ ಅಂಡ್ ಎಮೋಶನಲ್ ಲರ್ನಿಂಗ್: ವಾಟ್ ಡಸ್ ದಿ ರಿಸರ್ಚ್ ಸೇ– (ಪಿಪಿ 209218). ನ್ಯೂಯಾರ್ಕ್: ಟೀಚರ್ಸ್ ಕಾಲೇಜ್ ಪ್ರೆಸ್.
- ಬುಲೀಸ್ ಅಂಡ್ ವಿಕ್ಟಿಮ್ಸ್ ಇನ್ ಎ ಪ್ರೈಮೆರಿ ಕ್ಲಾಸ್ರೂಮ್: ಸ್ಕಾಫ್‌ಫೋಲ್ಡಿಂಗ್ ಅಕೊಲಾಬ್ರೇಟಿವ್ ಕಮ್ಯೂನಿಟಿ ಆಫ್ ಪ್ರಾಕ್ಟೀಸ್, ವೆರೊನಿಕಾ ಮೊರ್ಕಾಮ್ ಅಂಡ್ ವೆಂಡಿ ಚಮಿಂಗ್? ಪೊಟ್ವಿನ್, ಮರ್ಡೋಕ್ ಯೂನಿವರ್ಸಿಟಿ.







**ಕರ್ಪಗಮ್** ಅವರು ಪ್ರಸ್ತುತ ಅಜೀಂ ಪ್ರೇಂಜಿ ವಿಶ್ವವಿದ್ಯಾಲಯದ ಶೈಕ್ಷಣಿಕ ನಾಯಕತ್ವ ಮತ್ತು ಆಡಳಿತ ನಿರ್ವಹಣೆ ತಂಡದಲ್ಲಿ ಕೆಲಸ ಮಾಡುತ್ತಿದ್ದಾರೆ.ಅವರು ಭಾರತದ ವಿವಿಧ ಭಾಗಗಳಲ್ಲಿರುವ KFI ಶಾಲೆಗಳಲ್ಲಿ 12 ವರ್ಷಗಳಕಾಲ ವಿಜ್ಞಾನ, ಸಮಾಜ ವಿಜ್ಞಾನ ಮತ್ತು ಪರಿಸರ ಶಿಕ್ಷಣವನ್ನು ಬೋಧಿಸಿದ್ದಾರೆ. ಸ್ಪೆಲ್ಲಿಂಗ್, ಓದುವಿಕೆ–ಗ್ರಹಿಸುವಿಕೆ ಮತ್ತು ಬರವಣಿಗೆಯಲ್ಲಿ ತೊಂದರೆಯನ್ನು ಅನುಭವಿಸುತ್ತಿರುವ ಮಕ್ಕಳೊಡನೆ ವಿಶೇಷ ಶಿಕ್ಷಕರಾಗಿ ಅವರ ಪ್ರಸಕ್ತ ಕಲಿಕೆಯ ಮಟ್ಟಕ್ಕೆ ಪೂರಕವಾದಂತಹ ಪರ್ಯಾಯ ಪಠ್ಯಕ್ರಮ ಹಾಗು ವಿಷಯಗಳನ್ನು ಯೋಜಿಸುವುದರಲ್ಲಿ ಮತ್ತು ರಚಿಸುವುದರಲ್ಲಿ ನಿರತರಾಗಿದ್ದರು. ಇವರು ಮನಶ್ಶಾಸ್ತ್ರ ಮತ್ತು ಶಿಕ್ಷಣದಲ್ಲಿ ಸ್ನಾತಕೊತ್ತರ ಪದವಿಯನ್ನು ಹೊಂದಿದ್ದು ಕಲಿಕೆಯಲ್ಲಿ ಕಷ್ಟ ಅನುಭವಿಸುವ ಮಕ್ಕಳನ್ನು ನಿಭಾಯಿಸುವ ಅವರಿಗೆ ಮಾರ್ಗದರ್ಶನ ಮತ್ತು ಸಲಹೆ ನೀಡುವಿಕೆ ಕುರಿತು ಸ್ನಾತಕೋತ್ತರ ಡಿಪ್ಲೊಮಾ ಹೊಂದಿದ್ದಾರೆ. ಅವರು ಒರಿಗಾಮಿಯನ್ನು ಮಾಡುವುದರಲ್ಲಿ ಒಲವು ಉಳ್ಳವರು ಮತ್ತು ಮಕ್ಕಳೊಡನೆ ಸಮಯ ಕಳೆಯಲು ಇಷ್ಟಪಡುತ್ತಾರೆ. ಇವರನ್ನು karpagam.s@azimpremjifoundation.org ಯಲ್ಲಿ ಸಂಪರ್ಕಿಸಬಹುದು.